ದಿನಾಂಕ 29-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಆರ್.ಎಸ್.ಟಿ ವಕೀಲರಿಂದಃ</u>**

1. ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದು, ಕನ್ನಡ ಭಾಷೆಯನ್ನು ಸ್ವಲ್ಪ ಓದಲು ಬರುತ್ತದೆ. ದಾವಾ ಆಸ್ತಿಯ ಸಂಃ 380. ದಾವಾ ಆಸ್ತಿಯನ್ನು ನನ್ನ ಹಿರಿಯರಾದ ನನ್ನ ಗಂಡನ ತಂದೆ ತಾಯಿ ಹಿಡಿದಿರುತ್ತಾರೆ. ದಾವಾ ಆಸ್ತಿಯನ್ನು ಯಾರಿಂದ ನನ್ನ ಅತ್ತೆ ಮಾವ ಖರೀದಿ ಮಾಡಿರುತ್ತಾರೆಂದು ಗೊತ್ತಿಲ್ಲ. 1936 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಮಾಡಿದ ಆಸ್ತಿಯನ್ನು ನನ್ನ ಗಂಡನ ಪರವಾಗಿ ಆತನ ಇಬ್ಬರು ಸಹೋದರರು ಬಿಟ್ಟುಕೊಟ್ಟಿರುತ್ತಾರೆ.

2. ದಾವಾ ಆಸ್ತಿಯು ಸಂಪೂರ್ಣವಾಗಿ ನನ್ನ ಕಬ್ಜೆ ವಹಿವಾಟಿನಲ್ಲಿ ಇದ್ದು, ನನ್ನ ಮೈದುನರಿಗೆ ಹಕ್ಕು ಇರುವುದಿಲ್ಲ. ನನ್ನ ಮೈದುನರು ದಾವಾ ಆಸ್ತಿಯ ಮೇಲೆ ಇದ್ದ ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟ ಬಗ್ಗೆ ಗ್ರಾಮ ಪಂಚಾಯಿತಿಯಲ್ಲಿ ಸಹಿಗಳನ್ನು ದಾಖಲೆಗೆ ಮಾಡಿ ನೀಡಿರುತ್ತಾರೆ. ಗಣಪತಿ ಮತ್ತು ನಾರಾಯಣ ಎಂಬುವವರು ನನ್ನ ಮೈದುನರು ಇರುತ್ತಾರೆ. ನನ್ನ ಅತ್ತೆ ಮಾವ ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣ ಎಷ್ಟು ಇತ್ತು ಎಂದು ಗೊತ್ತಿಲ್ಲ. ಖರೀದಿ ಪತ್ರವನ್ನು ನಾನು ಓದಿರುತ್ತೇನೆ. ಖರೀದಿ ಪತ್ರದಲ್ಲಿ ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣ ಎಷ್ಟು ಇದೆ ಎಂದು ಗೊತ್ತಿಲ್ಲ. ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ಖರೀದಿ ಪತ್ರದಲ್ಲಿ ಆಸ್ತಿಯ ಚಕ್ಕುಬಂದಿ ಪೂ- ಕೆರೆ, ಪ-ರಸ್ತೆ, ಉ-ಸಿಂಪಿಗೇರ ರವರ ಮನೆ, ದ- ಮಸೀದಿ ಇರುವ ಬಗ್ಗೆ ನಮೂದು ಮಾಡಲಾಗಿದೆ. ಖರೀದಿ ಪತ್ರದಲ್ಲಿ ಸದರಿ ಚಕ್ಕುಬಂದಿ ನಮೂದಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಚಕ್ಕುಬಂದಿವುಳ್ಳ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವು-ದಿಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯಲ್ಲಿ ಮನೆಯನ್ನು ನಿರ್ಮಿಸಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಕಟ್ಟಡ ಪರವಾನಿಗೆ ಪಡೆದಿರುತ್ತೇನೆ. ಎಷ್ಟು ಅಳತೆವುಳ್ಳ ಮನೆಯನ್ನು ನಿರ್ಮಿಸುತ್ತೇನೆ ಎಂದು ಪರವಾನಿಗೆಯನ್ನು ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೋ ಅಥವಾ ಇಲ್ಲವೋ ನನಗೆ ನೆನಪಿಲ್ಲ. ನಾನು ನಿರ್ಮಿಸುತ್ತಿರುವ ಮನೆಯ ಉತ್ತರ ದಿಕ್ಕಿಗೆ ಪರಶುರಾಮ ಪುಂಡಲೀಕ ಮೂಳೆ ರವರ ಮನೆ ಇದೆ ಎಂದರೆ ಸರಿ. ಸದರಿ  ನಿರ್ಮಿಸುತ್ತಿರುವ ಮನೆಯ ಪೂರ್ವ ದಿಕ್ಕಿಗೆ ಬಸವರಾಜ ಕೊಂಚಿಗೇರಿ ರವರ ಖುಲ್ಲಾ ಜಾಗ ಇದೆ ಎಂದರೆ ಸಾಕ್ಷಿಯು  ಸದರಿ ಖುಲ್ಲಾ ಜಾಗವನ್ನು ಆತನು ಇತ್ತೀಚೆಗೆ ಹಿಡಿದಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಖುಲ್ಲಾ ಜಾಗವನ್ನು ಬಸವರಾಜ ಕೊಂಚಿಗೇರಿರವರು 10-15 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅದನ್ನು ಬಸವರಾಜರವರು ಯಾರಿಂದ ಖರೀದಿ ಮಾಡಿರುತ್ತಾರೆಂದು ಗೊತ್ತಿಲ್ಲ.

5. ನಾನು ಕಟ್ಟುತ್ತಿರುವ ಮನೆಯ ಜಾಗವು ನಾನು ಮೇಲೆ ಹೇಳಿದಂತೆ ಹಿರಿಯರಿಂದ ಬಂದ ಜಾಗವಾಗಿರುತ್ತದೆ. ಬಸವರಾಜ ಕೊಂಚಿಗೇರಿರವರು ಖರೀದಿಸಿರುವ ಸದರಿ ಖುಲ್ಲಾ ಜಾಗವು ನನ್ನ ಹಿರಿಯರಿಂದ ಖರೀದಿಸಿದ ಜಾಗ ಅಲ್ಲ ಎಂದರೆ ಗೊತ್ತಿಲ್ಲ. ಆತನು ಖರೀದಿಸಿದ ಖುಲ್ಲಾ ಜಾಗದ ವಿಸ್ತೀರ್ಣ ಗೊತ್ತಿಲ್ಲ. ನಾನು ಕಟ್ಟುತ್ತಿರುವ ಮನೆಯ ಉತ್ತರಕ್ಕೆ ಇರುವ ಪರಶುರಾಮರವರ ಆಸ್ತಿಯನ್ನು ಆತನು ನನ್ನ ಹಿರಿಯರಿಂದ ಖರಿದಿಸಿರುತ್ತಾನೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ